# ಪಲಾಜೊ ಸೀರೆ

ಎಲ್ಲ ಬಗೆಯ ವಸ್ತ್ರವಿನ್ಯಾಸಗಳಿಗೂ ಹೊಂದಿಕೆಯಾಗುವ ಪಲಾಜೊ ಸೀರೆಯನ್ನೂ ಬಿಟ್ಟಿಲ್ಲ ಎಂದರೆ ಬಹುತೇಕರಿಗೆ ಅಚ್ಚರಿಯಾಗಬಹುದು. ಸೀರೆಯೊಂದಿಗೆ ಪಲಾಜೊ ಧರಿಸುವುದಾದರೂ ಹೇಗೆ ಎಂದು ಮೂಗು ಮುರಿಯಬಹುದು. ಆದರೆ, ಅದಕ್ಕೂ ಸೈ ಎಂದಿದೆ ಫ್ಯಾಷನ್ ಜಗತ್ತು. ನೆರಿಗೆ ಹೊಯ್ದುಕೊಂಡು ಸೀರೆ ತೊಟ್ಟು ನಡೆಯಲು ಕಷ್ಟ ಎಂದೆನ್ನುವವರು ಈ ಬಗೆಯ ಉಡುಪು ಧರಿಸಿ ಸೀರೆ ತೊಟ್ಟ ಅನುಭೂತಿ ಪಡೆಯಬಹುದು. ಇದನ್ನು ಜಿಪ್‌ಸೂಟ್ ಎಂದು ಕರೆಯುವರು. ಪ್ಯಾಂಟ್ ಹಾಗೂ ಟಾಪ್ ಇರುವ ಜಂಪ್‌ಸೂಟ್ ಹಾಗೂ ಸೀರೆ ಈ ಎರಡರ ಮಿಶ್ರಣವೇ ಜಿಪ್‌ಸೂಟ್. ಜಂಪಸೂಟ್‌ನಂತೆ ಆರಾಮವಾಗಿ ತೊಡಬಲ್ಲ, ಸೀರೆಯ ಸೌಂದರ್ಯವನ್ನೂ ಪಡೆಯುವ ಈ ಶೈಲಿ ಯುವತಿಯರನ್ನು ಆಕರ್ಷಿಸಿದೆ. ಪಲಾಜೊ ಪ್ಯಾಂಟ್‌ಗೆ ತಕ್ಕ ಶಾರ್ಟ್ ಟಾಪ್ ಮೇಲೆ ಸೀರೆಯಂತೆ ಸೆರಗನ್ನು ಹೊದ್ದುಕೊಳ್ಳುವುದು ಈ ವಿನ್ಯಾಸದ ಮೂಲ. ನೆರಿಗೆ ಹಾಕುವ ಗೋಜಿಲ್ಲ. ಪಲಾಜೊ ಪ್ಯಾಂಟ್ ಸೀರೆ ನರಿಗೆಯ ಲುಕ್ ನೀಡುತ್ತದೆ. ಪಾರ್ಟಿ, ಮದುವೆ, ಹಬ್ಬ ಯಾವ ಸಮಯವಾದರೇನು ಎಲ್ಲದಕ್ಕೂ ಈ ಶೈಲಿ ಹೊಂದುತ್ತದೆ ಎನ್ನುವುದು ವಿನ್ಯಾಸಕರ ಅಭಿಮತ.



ಕೆಸರು ಹತ್ತುತ್ತದೆನ್ನುವವರು ಮಳೆಗಾಲ ಮುಗಿಯುವವರೆಗೂ ವಾರ್ಡ್‌ರೋಬ್‌ನಲ್ಲಿ ಇಟ್ಟರಾಯಿತು. ಇನ್ನು ದಶಕಗಳ ಹಿಂದೆ ಇದ್ದ ಮೈಗಂಟಿದ ಉಡುಪಿನ ಟ್ರೆಂಡ್ ಈಗ ಮಾಯವಾಗಿದೆ. ಈಗೇನಿದ್ದರೂ 'ದೊಗಲೆ ದೊಗಲೆ'ಯ ಯುಗ. ಸ್ಕರ್ಟ್, ಕುರ್ತಾ, ಟೀ–ಶರ್ಟ್ ಎಲ್ಲವೂ ದೊಗಲೆಯಾಗಿರುವುದು ಈಗಿನ ಟ್ರೆಂಡ್. ಅದಕ್ಕೊಪ್ಪುವಂತೆ ಪಲಾಜೊ ಕೂಡ ದೊಗಲೆ ಆಗಿರುವುದರಿಂದ ಬಹುತೇಕರು ಅದರತ್ತ ವಾಲಿದ್ದಾರೆ. ಅಲ್ಲದೇ ಲೆಗ್ಗಿನ್ಸ್‌ಗಳು ಕಾಲಿಗೆ ಅಂಟಿಕೊಂಡಂತೆ ಕಾಣುತ್ತವೆ. ತೊಡೆ ದಪ್ಪ ಇರುವವರಿಗೆ ಲೆಗ್ಗಿನ್ಸ್ ಸರಿಕಾಣುವುದಿಲ್ಲ. ಪಲಾಜೊ ಇಂತಹ ಸಂಗತಿಗಳನ್ನೆಲ್ಲ ತನ್ನಲ್ಲಿ ಅಡಗಿಸಿಕೊಳ್ಳುವುದರಿಂದ ಬಹುತೇಕರು ಇದನ್ನು ಅಪ್ಪಿಕೊಂಡಿದ್ದಾರೆ.

ತುಸು ಸಣ್ಣಗಿರುವವರನ್ನು ದಪ್ಪವಾಗಿ ಕಾಣುವಂತೆ ಮಾಡುವ, ದಪ್ಪಗಿರುವವರನ್ನು ಸಮಸ್ಥಿತಿಯಲ್ಲಿರುವಂತೆ ಬಿಂಬಿಸುವ ಮ್ಯಾಜಿಕ್ ಅನ್ನೂ ಪಲಾಜೊ ಮಾಡುತ್ತದೆ. ಎಂಟತ್ತು ವರ್ಷಗಳ ಹಿಂದೆ ಇದ್ದ ಜೀನ್ಸ್ ಜಾಗವನ್ನು ಈಗ ಪಲಾಜೊ ಆವರಿಸಿದೆ. ಈ ಹಿಂದೆ ಇದ್ದ ಪಟಿಯಾಲ ಪ್ಯಾಂಟ್‌ನ ಹೊಸ ಅವತರಣಿಕೆಯನ್ನು ಪಲಾಜೊ ಎಂದೆನ್ನಬಹುದೇನೋ. ಏಕೆಂದರೆ, ಹೆಚ್ಚು ನೆರಿಗೆಗಳುಳ್ಳ, ದೊಗಲೆಯಾಗಿ ಕಾಣುತ್ತಿದ್ದ ಪಟಿಯಾಲ ಬಹುತೇಕರನ್ನು ಆಕರ್ಷಿಸಿತ್ತು. ಆಗ ಲೆಗ್ಗಿನ್ಸ್ ಅನ್ನು ಹಿಂದಕ್ಕೆ ಸರಿಸಿ ಪಟಿಯಾಲ ಜನಪ್ರಿಯವಾಗಿತ್ತು. ಒಂದಷ್ಟು ದಿನ ಮಿಂಚಿದ ಪಟಿಯಾಲದ ಜಾಗದಲ್ಲಿ ಈಗ ಪಲಾಜೊ ಕುಳಿತಿದೆ. ಸ್ಟ್ರೈಟ್ ಕಟ್ ಇರುವ, ದೊಗಲೆಯಾಗಿರುವ ಪಲಾಜೊ ಬಹುಕಾಲದಿಂದ ಫ್ಯಾಷನ್ ಜಗತ್ತಿನಲ್ಲಿ ಓಡುತ್ತಿದೆ.



## ಪಲಾಜೊದೊಂದಿಗೆ ಹೀಗೆ ಸೆಟ್ ಮಾಡಿ

ಶಾರ್ಟ್ ಟಾಪ್ ಜೊತೆಗೆ ಪಲಾಜೊ ಧರಿಸುವುದು ಈಗಿನ ಟ್ರೆಂಡ್. ಎಂಬ್ರಾಯಿಡರಿ, ಹೂವಿನ ಚಿತ್ತಾರವಿರುವ ಹಾಗೂ ಜರಿ ವಿನ್ಯಾಸವಿರುವ ಟಾಪ್‌ನೊಂದಿಗೆ ಪಲಾಜೊ ಮ್ಯಾಚ್ ಮಾಡಿಕೊಳ್ಳಬಹುದು. ಹೆಚ್ಚು ಆಡಂಬರದ ವಿನ್ಯಾಸವಿರುವ ಟಾಪ್‌ಗಳು ಪಲಾಜೊಗೆ ಹೆಚ್ಚು ಹೊಂದಿಕೆಯಾಗುತ್ತವೆ. ಟಾಪ್ ಗಾಢ ಬಣ್ಣದಿದ್ದರೆ, ಪಲಾಜೊ ತಿಳಿಬಣ್ಣದ್ದಿರಲಿ. ಹಬ್ಬದ ಸಮಯಕ್ಕೆ ಇವು ಹೆಚ್ಚು ಹೊಂದಿಕೆಯಾಗುತ್ತವೆ. ಇದಲ್ಲದೇ ಲಾಂಗ್ ಟಾಪ್, ಮೊಣಕಾಲುವರೆಗಿನ ಟಾಪ್, ಅನಾರ್ಕಲಿ ಡ್ರೆಸ್, ಸ್ಟ್ರೈಟ್ ಟಾಪ್ ಹೀಗೆ ಎಲ್ಲದಕ್ಕೂ ಪಲಾಜೊವನ್ನು ಮ್ಯಾಚ್ ಮಾಡಿಕೊಳ್ಳಬಹುದು. ಖಾದಿ, ಕೈಮಗ್ಗವನ್ನು ಫ್ಯಾಷನ್ ಲೋಕಕ್ಕೆ ಪರಿಚಯಿಸಿದ ವಸ್ತ್ರವಿನ್ಯಾಸಕಿ ಅಂಜು ಮೋದಿ ಅವರ ಕೈಚಳಕದಲ್ಲಿ ಅರಳಿದ 'ಟ್ಯೂನಿಕ್ ವಿಥ್ ಪಲಾಜೊ' ಫ್ಯಾಷನ್ ಲೋಕದಲ್ಲಿ ಟ್ರೆಂಡ್ ಸೃಷ್ಟಿಸಿದೆ. ಹೀಗೆ ಎಲ್ಲ ಬಗೆಯ ಡ್ರೆಸ್‌ಗಳಿಗೂ ಪಲಾಜೊ ನಂಟು ಬೇಕೆಂದೆನಿಸಿದೆ.

## ಪಲಾಜೊ ಜೀನ್ಸ್

ಹೆಣ್ಣುಮಕ್ಕಳಿಗೆ ಜೀನ್ಸ್ ಎಂದರೆ ಅದೇನೋ ಒಂದು ಬಗೆಯ ಆಕರ್ಷಣೆ. ದಶಕಗಳಿಂದಲೂ ಜೀನ್ಸ್ ಮೇಲಿನ ವ್ಯಾಮೋಹ ಕಡಿಮೆಯಾಗಿಲ್ಲ. ಆದರೆ ಮೊದಲಿನ ರೀತಿ ಟೈಟ್ ಜೀನ್ಸ್ ಧರಿಸಲು ಈಗ ಬಹುತೇಕರು ಇಷ್ಟಪಡುವುದಿಲ್ಲ. ಅಂತಹವರಿಗಾಗಿಯೇ ವಿನ್ಯಾಸಗೊಂಡಿವೆ ಪಲಾಜೊ ಜೀನ್ಸ್. ಕಾಲೇಜು ಯುವತಿಯರ ಮನ ಕದ್ದಿರುವ ಈ ಜೀನ್ಸ್‌ಗಳಿಗೆ ಮೇಲೊಂದು ಟೀ–ಶರ್ಟ್ ಅಥವಾ ಟಾಪ್ ತೊಟ್ಟರಾಯಿತು. ಟ್ರೆಂಡಿಯಾಗಿ ಕಾಣುವ ಇವು, ಭಿನ್ನ ಲುಕ್ ನೀಡುವುದರಲ್ಲಿ ಎರಡು ಮಾತಿಲ್ಲ.

ಇನ್ನು ಪ್ರಿಂಟೆಡ್ ಪಲಾಜೊ ಅಥವಾ ಟ್ರಾನ್ಸ್‌ಪರೆಂಟ್ ಪಲಾಜೊಗಳು ಕ್ಲಾಸಿ ಲುಕ್ ನೀಡುತ್ತವೆ. ಹೂವಿನ ಚಿತ್ತಾರವಿರುವ ಪಲಾಜೊಗಳು ಭಿನ್ನ ಲುಕ್ ನೀಡುತ್ತವೆ. ಪಾರ್ಟಿಯಲ್ಲಿ ಇತರರಿಗಿಂತ ಭಿನ್ನವಾಗಿ ಕಾಣಿಸಿಕೊಳ್ಳಬೇಕು ಎಂದೆನ್ನುವವರು ಹೂವಿನ ಚಿತ್ತಾರವಿರುವ ಪಲಾಜೊ ಆಯ್ಕೆ ಮಾಡಿಕೊಳ್ಳಬಹುದು. ಪಾರ್ಟಿ ವೇರ್, ಹಬ್ಬ, ಮದುವೆ, ಸಣ್ಣಪುಟ್ಟ ಸಮಾರಂಭಗಳಲ್ಲೂ ಪಲಾಜೊ ಜತೆಯಾಗುತ್ತದೆ. ಅದ್ದೂರಿತನವಿರುವ ಕುರ್ತಾದೊಂದಿಗೆ ಕಾಂಟ್ರಾಸ್ಟ್ ಪಲಾಜೊ ಧರಿಸಿದರೆ ಎಲ್ಲ ಸಮಯಕ್ಕೂ ಹೊಂದುತ್ತದೆ. ಈ ಬಗೆಯ ಉಡುಪುಗಳಿದ್ದರೆ ಪಾರ್ಟಿಗೆಂದು, ಹಬ್ಬಕ್ಕೆಂದು ತಯಾರಾಗಲು ಹೆಚ್ಚು ಸಮಯ ವ್ಯಯಿಸುವ ಅಗತ್ಯವಿರುವುದಿಲ್ಲ.

## ಹಳೆಯ ಸೀರೆಯಾಯಿತು ಪಲಾಜೊ

ಫ್ಯಾಷನ್ ಎಂದಿಗೂ ನಿಂತ ನೀರಲ್ಲ. ನಿತ್ಯ ಹೊಸತನದೊಂದಿಗೆ ಹೊಳೆಯುತ್ತಿರುತ್ತದೆ. ಹಳೆಯ ಬಟ್ಟೆಗಳಿಗೂ ಹೊಸ ವಿನ್ಯಾಸ ನೀಡಿ, ನಾವೀನ್ಯತೆಯ ಹೊಳಹು ಕೊಟ್ಟ ಉಡುಗೆಗಳು ಮಾರುಕಟ್ಟೆಯಲ್ಲಿ ಟ್ರೆಂಡ್ ಸೃಷ್ಟಿಸುತ್ತಿವೆ. ಇವುಗಳ ಸಾಲಿನಲ್ಲಿ ಪಲಾಜೊ ಹಿಂದೆ ಬಿದ್ದಿಲ್ಲ. ಅಮ್ಮನ ಹಳೆಯ ಸೀರೆಗಳೂ ಪಲಾಜೊ ರೂಪು ತಳೆದು ಯುವಮನಗಳನ್ನು ಆಕರ್ಷಿಸುತ್ತವೆ. ದೊಡ್ಡ ದೊಡ್ಡ ಹೂವಿನ ಚಿತ್ತಾರವಿರುವ ಸೀರೆ, ಕಾಟನ್ ಪ್ಲೇನ್ ಸೀರೆ, ಜರಿ ಪ್ಲೇನ್ ಸೀರೆಗಳು ಈಗ ಪಲಾಜೊ ರೂಪು ತಳೆಯುತ್ತಿವೆ. ಇವೂ ಕೂಡ ಮೆಲ್ಲಗೆ ಟ್ರೆಂಡ್ ಆಗುತ್ತಿವೆ. ■